ಆದುದರಿಂದ ಈ ವರ್ಷದಲ್ಲಿ ತುರ್ತು ರಿಪೇರಿ ಮಾಡುವುದಕ್ಕೋಸ್ಕರ ಸಂಬಂಧಪಟ್ಟ ಇಲಾಖೆಯ ಪುತ್ತೂರು ವಿಭಾಗದ ಕಾರ್ಯಕಾರಿ ಅಭಿಯಂತರರಿಗೆ ಆದೇಶ ಹಾಗೂ ಸರ್ಕಾರದಿಂದ ಹಣವನ್ನು ನೀಡುವಂತೆ, ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಲೋಕೋಪಯೋಗಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಆ ರಸ್ತೆಯನ್ನು ರಿಪೇರಿ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

ರಾಯಭಾಗ್ ಸಕ್ಕರೆ ಕಾರ್ಖಾನೆಯಂ ೬೦ ನೌಕರರನ್ನು ಕೆಲಸದಿಂದ ತೆಗೆದಂಹಾಕಿರುವುದರಿಂದ ಅವರೆಲ್ಲಾ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ರಾಯಭಾಗ ಸಕ್ಕರೆ ಕಾರ್ಖಾನೆ ೬೦ ನೌಕರರನ್ನು ಕೆಲಸದಿಂದ ತೆಗೆದುಹಾಕಿರುವುದನ್ನು ಪ್ರತಿಭಟಿಸಿ ಉಪವಾಸ ಸತ್ಯಾಗ್ರಹ ಹೂಡಿದ್ದು ಈ ಬಗ್ಗೆ ಕಾರ್ಖಾನೆಯವರಾಗಲೀ, ಜಿಲ್ಲಾಧಿಕಾರಿಯವರಾಗಲಿ ಯಾವ ಕ್ರಮವನ್ನೂ ಕೈಕೊಂಡಿರುವುದಿಲ್ಲ. ಬರಗಾಲ ಸಮಿತಿಗೆ ನೇಮಕವಾಗಿರುವ ಶಾಸಕರುಗಳನ್ನು ಹಾಗೂ ಜಿಲ್ಲೆಯ ಶಾಸಕರುಗಳು ಅವರೊಡನೆ ಮಾತನಾಡಿ ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ಕಾರ್ಮಿಕರ ನಡುವಣ ವಿವಾದವನ್ನು ಪರಿಹರಿಸುವ ಬಗ್ಗೆ ಕ್ರಮ ಕೈಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದಾರೆ. ಆದರೂ ಇದುವರೆಗೂ ವಿವಾದ ಪರಿಹಾರದ ಬಗ್ಗೆ ಏನೂ ಆದಂತೆ ಕಂಡು ಬರುವುದಿಲ್ಲ. ಸರಕಾರದವರು ಕೂಡಲೇ ಕ್ರಮ ಕೈಕೊಂಡು ಮೇಲ್ಕಂಡ ವಿವಾದವನ್ನು ಪರಿಹರಿಸಿ ಕಾರ್ಖಾನೆಯಿಂದ ತೆಗೆದುಹಾಕಿರುವ ಕಾರ್ಮಿಕರನ್ನು ಕೆಲಸದ ಮೇಲೆ ತೆಗೆದುಕೊಳ್ಳಲು ಅವಶ್ಯಕ ಕ್ರಮಗಳನ್ನು ಕೈಕೊಳ್ಳಬೇಕೆಂದು ಸರಕಾರದವರನ್ನು ಒತ್ತಾಯಿಸುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಅಧ್ಯಕ್ಷರೇ, ಈ ಕಾರ್ಖಾನೆಯಲ್ಲಿ ಕೆಲವರನ್ನು ಕೆಲಸದಿಂದ ತೆಗೆದುಹಾಕಿರುವುದು ನಿಜ. ಅವರ ಮೇಲೆ ಗುರುತರವಾದ ಅಪಾದನೆಗಳಿಂ ಇದ್ದುದರಿಂದ ತೆಗೆದುಹಾಕಿದ್ದಾರೆ. ಕಾನೂನಿನ ಪ್ರಕಾರ ಅವರು ಈ ಸಕ್ಕರೆ ಕಾರ್ಖಾನೆ ಡೈರೆಕ್ಟರ್ ಏನು ಇದ್ದಾರೆ, ಅವರಲ್ಲಿ ಅಪೀಲು ಹಾಕಲಿ. ಕಾನೂನಿನ ಪ್ರಕಾರ ಯಾವ ರೀತಿ ತೀರ್ಮಾನ ಮಾಡಬಹುದು, ಆ ರೀತಿ ತೀರ್ಮಾನ ಮಾಡುತ್ತಾರೆ.

ಅಫಜಲ್‌ಪುರದ ಟಿ.ಎ.ಪಿ.ಸಿ.ಎಂ.ಸಿ.ಗೆ ಅಧ್ಯಕ್ಷರನ್ನು ಆರಿಸದೇ ಇರುವ ಬಗ್ಗೆ

ಶ್ರೀ ಮಾಲೀಕಯ್ಯ ಗುತ್ತೇದಾರ್.—ಮಾನ್ಯ ಅಧ್ಯಕ್ಷರೇ, ಅಫಜರಪುರ ಟಿ.ಎ.ಪಿ.ಸಿ.ಎಂ.ಸಿ.ಯಲ್ಲಿ ಇಲ್ಲಿಯವರೆಗೆ ಎಂಟು ಬಾರಿ ಸಭೆ ಸೇರಿದಾಗ್ಯೂ ಯಾವ ಸದಸ್ಯರೂ ಅದರ ಬಗ್ಗೆ ಆಸಕ್ತಿ ತೋರದೆ ಟಿ.ಎ.ಪಿ.ಸಿ.ಎಂ.ಸಿ.ಯ ಅಧ್ಯಕ್ಷರನ್ನು ಆರಿಸಿಲ್ಲ. ಇದರಿಂದ ಅಲ್ಲಿಯ ವ್ಯವಹಾರಗಳಿಗೆ ಬಹಳ ತೊಂದರೆಯಾಗುತ್ತಿದೆ. ಇದನ್ನು ಗಮನಿಸಿ ಸಹಕಾರ ಇಲಾಖೆಯ ಜಾಯಿಂಟ್ ರಿಜಿಸ್ಟ್ರಾರ್‌ರವರು ಈ ಟಿ.ಎ.ಪಿ.ಸಿ.ಎಂ.ಸಿ.ಯನ್ನು ಸರ್ಕಾರ ವಶಪಡಿಸಿಕೊಳ್ಳಬೇಕೆಂದು ಈಗಾಗಲೇ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಆದ್ದರಿಂದ ಕೂಡಲೇ ಮಾನ್ಯ ಸಹಕಾರ ಮಂತ್ರಿಗಳು ಕ್ರಮ ತೆಗೆದುಕೊಂಡು ಅಫಜಲಪುರ ಟಿ.ಎ.ಪಿ.ಸಿ.ಎಂ.ಸಿ.ಯನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಅಧ್ಯಕ್ಷರೇ, ಚುನಾವಣೆಗೋಸ್ಕರ ಎಂಟು ಸಾರಿ ಸಭೆಯನ್ನು ಕರೆದರೂ ಕೂಡ ಸಾಕಷ್ಟು ಕೋರಂ ಇಲ್ಲದೆ ಸಾಧ್ಯವಾಗಿಲ್ಲ. ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಲೇಟೆಸ್ಟ್ ಪೊಸಿಷನ್ ಏನು ಇದೆ ತಿಳಿದುಕೊಳ್ಳಿ ಎಂದು ಹೇಳಿದ್ದೇನೆ. ಇನ್ನೆರಡು ಮೂರು ದಿವಸದಲ್ಲಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ.